6) ವಿಷಯ: ರೈತರಿಗೆ ಉತಾರ ವಿತರಿಸದಿರುವ ಹಾಗೂ ಹದ್ದು-ಬಸ್ತಿ ಗುರುತಿಸಿಕೊಡುವ ಬಗ್ಗೆ.

****

ಶ್ರೀ ಸಂಜಯ ಬಿ. ಪಾಟೀಲ (ಬೆಳಗಾಂವ(ಗ್ರಾಮಾಂತರ): ಎರಡು ವರ್ಷಗಳ ಹಿಂದೆ ಬೆಳಗಾವಿ ತಾಲ್ಲೂಕಿನ ಸುಮಾರು 10 ಹಳ್ಳಿಗಳಲ್ಲಿ ಭೂಮಿ ಮರುಮಾಪನೆಯಾಗಿದ್ದು, ರೈತರಿಗೆ ಉತಾರ ವಿತರಿಸದಿರುವ ಹಾಗೂ ಹದ್ದು-ಬಸ್ತಿ ಗುರುತಿಸಿಕೊಡುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಬೆಳಗಾವಿ ಜಿಲ್ಲೆಯ ಬೆಳಗಾವಿ, ಖಾನಾಪುರ ಮತ್ತು ಹುಕ್ಕೇರಿ ತಾಲ್ಲೂಕುಗಳಲ್ಲಿ ತಲಾ 10 ಗ್ರಾಮಗಳನ್ನು ಮರುಭೂಮಾಪನ ಮಾಡಿ ಅಂತಿಮ ದಾಖಲೆಗಳನ್ನು ತಯಾರಿಸಿ, ತಾಲ್ಲೂಕು ಭೂಮಿ ಕೇಂದ್ರಗಳಲ್ಲಿ ಹೊಸದಾಗಿ ಪಹಣಿಯನ್ನು ಸೃಜಿಸುವ ಸಲುವಾಗಿ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ. ಎಲ್ಲಾ ಆಡಳಿತಾತ್ಮಕ ಮತ್ತು ತಂತ್ರಾಂಶಕ್ಕೆ ಸಂಬಂಧಪಟ್ಟ ಸಮಸ್ಯೆಗಳನ್ನು ಪರಿಹರಿಸಿ ಜನವರಿ-2015 ರ ಒಳಗಾಗಿ ಪಹಣಿ (ಉತಾರ)ಗಳನ್ನು ವಿತರಣೆ ಮಾಡಲು ಹಾಗೂ ಸ್ವೀಕೃತ ಹದ್ದುಬಸ್ತು ಅರ್ಜಿಗಳನ್ನು ಅಳತೆ ಮಾಡುವ ಬಗ್ಗೆ ಅವಶ್ಯಕ್ರಮ ಕೈಗೊಳ್ಳಲಾಗುವುದು.

ಶ್ರೀ ಸಂಜಯ ಬಿ.ಪಾಟೀಲ: ಮಾನ್ಯ ಅಧ್ಯಕ್ಷರೆ, ಭೂಮಿಯನ್ನು ಮರು ಭೂಮಾಪನ ಮಾಡಿದ್ದಾರೆ. ನಾವು, ಅದರ ಬಗ್ಗೆ ಉತ್ತರವನ್ನು ರೈತರಿಗೆ ಕೊಟ್ಟಿಲ್ಲ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಅವರು ಹೇಳಿದ ತೀರ್ಮಾನವೇ ಹಾಗೆ ಇದೆ. ಮಾನ್ಯ ರೇವಣ್ಣನವರು ಬಂದಾಗ ಮಾತನಾಡಿದ್ದರೆ, ಬಹಳ ಬೇಗನೇ clear ಮಾಡುತ್ತಿದ್ದರು. ಬೆಳಗಾವಿ ಜಿಲ್ಲೆಯ ಬೆಳಗಾವಿ, ಖಾನಾಪುರ ಮತ್ತು ಹುಕ್ಕೇರಿ

ತಾಲ್ಲೂಕುಗಳಲ್ಲಿ ತಲಾ 10 ಗ್ರಾಮಗಳನ್ನು ಮರುಭೂಮಾಪನ ಮಾಡಿ ಅಂತಿಮ ದಾಖಲೆಗಳನ್ನು ತಯಾರಿಸಿ, ತಾಲ್ಲೂಕು ಭೂಮಿ ಕೇಂದ್ರಗಳಲ್ಲಿ ಹೊಸದಾಗಿ ಪಹಣಿಯನ್ನು ಸೃಜಿಸುವ ಸಲುವಾಗಿ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ. ಎಲ್ಲಾ ಆಡಳಿತಾತ್ಮಕ ಮತ್ತು ತಂತ್ರಾಂಶಕ್ಕೆ ಸಂಬಂಧಪಟ್ಟ ಸಮಸ್ಯೆಗಳನ್ನು ಪರಿಹರಿಸಿ ಜನವರಿ–2015ರ ಒಳಗಾಗಿ ಪಹಣಿ (ಉತಾರ)ಗಳನ್ನು ವಿತರಣೆ ಮಾಡಲು ಹಾಗೂ ಸ್ವೀಕೃತ ಹದ್ದುಬಸ್ತು ಅರ್ಜಿಗಳನ್ನು ಅಳತೆ ಮಾಡುವ ಬಗ್ಗೆ ಅವಶ್ಯ ಕ್ರಮ ಕೈಗೊಳ್ಳಲಾಗುವುದು.

7) **ವಿಷಯ: ಶಿವಮೊಗ್ಗ ನಗರ ವಿಮಾನ ನಿಲ್ದಾಣ ಕಾಮಗಾರಿಯು ನಿಂತು ಹೋಗಿರುವ ಬಗ್ಗೆ**

****

ಶ್ರೀ ಕೆ.ಬಿ. ಪ್ರಸನ್ನಕುಮಾರ್ (ಶಿವಮೊಗ್ಗ): ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ನಗರ ವಿಮಾನ ನಿಲ್ದಾಣ ಕಾಮಗಾರಿಯು ನಿಂತು ಹೋಗಿರುವ ಬಗ್ಗೆ ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ವಾರ್ತಾ ಮತ್ತು ಹಜ್ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಆರ್. ರೋಷನ್ ಬೇಗ್ (ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ವಾರ್ತಾ ಮತ್ತು ಹಜ್ ಸಚಿವರು): ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ಸೋಗಾನೆ ಗ್ರಾಮದಲ್ಲಿ ವಿಮಾನ ನಿಲ್ದಾಣವನ್ನು ಅಭಿವೃದ್ಧಿಪಡಿಸಲು ದಿನಾಂಕ:23.03.2007ರ ಸರ್ಕಾರಿ ಆದೇಶದಲ್ಲಿ ಅನುಮೋದನೆ ನೀಡಲಾಗಿದೆ. ಶಿವಮೊಗ್ಗ ವಿಮಾನ ನಿಲ್ದಾಣದ ಯೋಜನೆಯನ್ನು M/s. Maytas Infra Ltd., NCC Infrastructure Holding Ltd., VIE India Project Development and Holding LCC ಕನ್ಸಾರ್ಷಿಯಂ ಒಳಗೊಂಡಂತೆ M/s. Shimoga Airport Developers Private Limited ಇವರಿಗೆ ಮೂಲಗುತ್ತಿಗೆಯನ್ನು ನೀಡಲಾಗಿದ್ದು, ಅಭಿವೃದ್ಧಿದಾರರು ಸರ್ಕಾರದೊಂದಿಗೆ ಯೋಜನಾ ಅಭಿವೃದ್ಧಿ ಒಪ್ಪಂದವನ್ನು ದಿನಾಂಕ:02.04.2008ರಂದು ಸಹಿ ಮಾಡಿರುತ್ತಾರೆ. ಮುಂದುವರೆದು ಈ ಮಧ್ಯೆ Maytas Infra Ltd. ಕಂಪನಿಯ ಮೂಲ ಕಂಪನಿಯಾದ ಸತ್ಯಂ